ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ,
ನಂ.4 ಕಟ್ಟಡಗಳ ಉಪವಿಭಾಗ
ಲೋಕೋಪಯೋಗಿ ಇಲಾಖೆ, ಬೆಂಗಳೂರು-560 001.

ದೂರವಾಣಿ ಸಂಖ್ಯೆ: 080-22267585
ಇ-ಮೇಲ್: aeeno4bldg@gmail.com

ಲೋಕೋಪಯೋಗಿ ಇಲಾಖೆ

ಸಂ: ಸಕಾಅ/ಕಉವಿ-4/ಕಿ.ಇಂ/ಕ.ದೃಢೀಕರಣ ಪತ್ರ/2023-24/443 ದಿನಾಂಕ: 05.08.2023

ರವರಿಗೆ,

The President,
Orchids The International School,
No. 5/5, Hosahalli Village,
Gollarapalya, Herohalli,
Magadi Main Road,
Bangalore – 560 0091

ಮಾನ್ಯರೆ,

ವಿಷಯ: ಕಟ್ಟಡದ ಸಮರ್ಥನ ಪ್ರಮಾಣ ಪತ್ರವನ್ನು ನವೀಕರಣಗೊಳಿಸಿಕೊಡುವ ಬಗ್ಗೆ.

ಉಲ್ಲೇಖ: 1. ತಮ್ಮ ಮನವಿ ಪತ್ರ ದಿನಾಂಕ: 22.07.2021
2. ಈ ಕಛೇರಿ ಪತ್ರ ಸಂಖ್ಯೆ: 2022-23/722 ದಿನಾಂಕ 29.12.2021
3. ಕಾರ್ಯಪಾಲಕ ಅಭಿಯಂತರರು, ನಂ. 1, ಕಟ್ಟಡಗಳ ವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ: ಕಾಪಾಅ/ಕವಿ-1/ಎಇ-5 ದಿನಾಂಕ 15.09.2022
4. ತಮ್ಮ ಮನವಿ ಪತ್ರ ದಿನಾಂಕ: 17.07.2023
5. ಕರ್ನಾಟಕ ಸರ್ಕಾರ ಅಪರ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ರವರ ಸುತ್ತೋಲೆ ಪತ್ರ ಸಂಖ್ಯೆ : ಲೋಇ 59 ಬಿಇಡಿ 2019 ಬೆಂಗಳೂರು ದಿ: 06.05.2022

<<<<<>>>>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, Orchids The International School, No. 5/5, Hosahalli Village, Gollarapalya, Herohalli, Magadi Main Road, Bangalore – 560 0091 ಇಲ್ಲಿನ ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನವೀಕರಣಗೊಳಿಸಿಕೊಡುವಂತೆ ಉಲ್ಲೇಖಿತ (1)ರ ಪತ್ರದಲ್ಲಿ ಕೋರಿರುತ್ತೀರಿ.

ಅದರಂತೆ, ಈ ಉಪವಿಭಾಗದ ವತಿಯಿಂದ ಶಾಲಾ ಕಟ್ಟಡದ ಪರಿವೀಕ್ಷಣೆ ಕೈಗೊಂಡು ಉಲ್ಲೇಖ (2)ರ ಪತ್ರದಲ್ಲಿ ವಿಭಾಗ ಕಛೇರಿಗೆ ವರದಿ ಸಲ್ಲಿಸಲಾಗಿದ್ದು, ಕಾರ್ಯಪಾಲಕ ಅಭಿಯಂತರರು, ನಂ. 1, ಕಟ್ಟಡಗಳ ವಿಭಾಗ, ಬೆಂಗಳೂರು ರವರು ಶಾಲಾ ಕಟ್ಟಡಕ್ಕೆ ಉಲ್ಲೇಖ (3)ರಲ್ಲಿ ಸುರಕ್ಷರತಾ ಪ್ರಮಾಣ ಪತ್ರವನ್ನು ನೀಡಿರುತ್ತಾರೆ.

ಮುಂದುವರೆದು, ಉಲ್ಲೇಖ (4) ರ ಮನವಿ ಪತ್ರದಲ್ಲಿ ಈಗಾಗಲೇ ನೀಡಿರುವ ಕಟ್ಟಡದ ಸುರಕ್ಷರತಾ ಪ್ರಮಾಣ ಪತ್ರವನ್ನು ನವೀಕರಿಸಿ ಕೊಡುವಂತೆ ಕೋರಿರುತ್ತೀರಿ.

ಅದರಂತೆ, Orchids The International School, No. 5/5, Hosahalli Village, Gollarapalya, Herohalli, Magadi Main Road, Bangalore – 560 0091 ಇಲ್ಲಿನ ಕಟ್ಟಡವನ್ನು ದಿನಾಂಕ: 01.08.2023 ರಂದು ಮತ್ತೊಮ್ಮೆ ಸಂಬಂಧಪಟ್ಟ ಇಂಜಿನಿಯರ್ ಹಾಗೂ ತಮ್ಮ ಶಾಲಾ ಸಿಬ್ಬಂದಿಯವರೊಂದಿಗೆ ಕಟ್ಟಡದ ಒಳಭಾಗ ಹಾಗೂ ಹೊರಭಾಗವನ್ನು ಪರಿವೀಕ್ಷಣೆ ಮಾಡಲಾಗಿ, ಪ್ರಸ್ತುತ ಸದರಿ ಕಟ್ಟಡವು ತಳ + ನೆಲಮಹಡಿಯೊಂದಿಗೆ ಮೂರು ಅಂತಸ್ತಿನ ಕಟ್ಟಡವನ್ನು ಹೊಂದಿದ್ದು, ಸದರಿ ಕಟ್ಟಡವನ್ನು 2006 ರಲ್ಲಿ ನಿರ್ಮಾಣ ಮಾಡಲಾಗಿರುತ್ತದೆ ಎಂದು ಪರಿವೀಕ್ಷಣೆ ಸಮಯದಲ್ಲಿ ತಿಳಿಸಿರುತ್ತೀರಿ. ಕಟ್ಟಡವು ಆರ್.ಸಿ.ಸಿ. ತೊಲೆ ಮತ್ತು ಕಂಬಗಳಿಂದ ನಿರ್ಮಿಸಿದ್ದು, ವಿನೈಲ್ ಫ್ಲೋರಿಂಗ್ ನೊಂದಿಗೆ, ಅಲ್ಯೂಮಿನಿಯಂ ಕಿಟಕಿಗಳು ಮತ್ತು ಫ್ಲಷ್ ಬಾಗಿಲುಗಳನ್ನು ಅಳವಡಿಸಲಾಗಿರುತ್ತದೆ. ಆದರೆ, ಸದರಿ ಕಟ್ಟಡದಲ್ಲಿ ಪ್ರಸ್ತುತ ಶಾಲೆಯವರು ತಳ + ನೆಲ, 1ನೇ ಮತ್ತು 2ನೇ ಮಹಡಿಗಳನ್ನು ಮಾತ್ರ ಉಪಯೋಗಿಸುತ್ತಿರುವುದು ಕಂಡುಬಂದಿರುತ್ತದೆ.

ಮುಂದುವರೆದು, ಕಟ್ಟಡಕ್ಕೆ ಸಂಬಂಧಪಟ್ಟ ಕಾಂಕ್ರೀಟ್ ಗ್ರೇಡ್, ಸ್ಟೀಲ್, ಸಿಮೆಂಟ್, ಮರಳು ಇತ್ಯಾದಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಅಳವಡಿಸುವ ಸಾಮಾಗ್ರಿಗಳ ಪರೀಕ್ಷೆ ವರದಿಗಳು ಇಲ್ಲದಿರುವ ಕಾರಣದಿಂದ ಉಲ್ಲೇಖ (5) ರ ಸರ್ಕಾರದ ಸುತ್ತೋಲೆಯಲ್ಲಿ ಕನಿಷ್ಟ ಎರಡು ರೀತಿಯ Non Destructive test ಗಳನ್ನು ಕೈಗೊಳ್ಳಲು ಸೂಚಿಸಲಾಗಿರುತ್ತದೆ. ಅದರಂತೆ, ಸದರಿ ಶಾಲಾ ಕಟ್ಟಡದ N.D.T Test ಗಳನ್ನು ಯು.ವಿ.ಸಿ.ಇ. ಬೆಂಗಳೂರು ವಿಶ್ವವಿದ್ಯಾಲಯ, ಸಿವಿಲ್ ಇಂಜನಿಯರ್ ವಿಭಾಗದ Associate Professor Dr. Chethan K, M.tech (industrial structures – NITK) Ph.D(NITK) ರವರು ಡಿಸೆಂಬರ್ 2021 ರಲ್ಲಿ ಪರೀಕ್ಷಿಸಿ ಪರೀಕ್ಷಾ ವರದಿಗಳನ್ನು ನೀಡಿರುತ್ತಾರೆ. ಸದರಿ ಪರೀಕ್ಷಾ ವರದಿಯಲ್ಲಿ **"National Building code of India and its Part 6 Strucutral Design and other relevant codes "** ರಂತೆ ಕಟ್ಟಡವನ್ನು ನಿರ್ಮಿಸಲಾಗಿರುತ್ತದೆ ಎಂದು ದೃಢೀಕರಿಸಿರುತ್ತಾರೆ.

ಉಲ್ಲೇಖ (2) ರ ಸರ್ಕಾರದ ಸುತ್ತೋಲೆಯಲ್ಲಿನ ಕ್ರಮ ಸಂಖ್ಯೆ (2) ರಲ್ಲಿ ಸೂಚಿಸಿರುವಂತೆ ನಗರ ಪ್ರದೇಶದಲ್ಲಿ ಒಂದು ಶಾಲೆಗೆ / ಕಾಲೇಜಿಗೆ – ರೂ. 5,000.00 ಗಳನ್ನು ಶುಲ್ಕವಾಗಿ ಪಾವತಿಸಲು ಸೂಚಿಸಿರುವ ಹಿನ್ನಲೆಯಲ್ಲಿ ಸದರಿ ಸಂಸ್ಥೆಯವರು ಚಲನ್ ಉಲ್ಲೇಖ ಸಂಖ್ಯೆ: CR0823005900009639 dtd. 05.08.2023 ರಲ್ಲಿ ರೂ. 5,000.00 ಗಳನ್ನು ಪಾವತಿಸಿರುತ್ತಾರೆ.

ಸದರಿ ಶಾಲಾ ಕಟ್ಟಡದ ಎಲ್ಲಾ ಮಹಡಿಗಳು ಹಾಗೂ ಪ್ರಮುಖ ಭಾಗಗಳನ್ನು ಪರಿಶೀಲಿಸಲಾಯಿತು. ಆದರೆ, ಕಟ್ಟಡದ ಗೋಡೆಗಳಲ್ಲಿ ಕಂಡುಬಂದಿರುವ ಬಿರುಕು ಹಾಗೂ ಒಳಭಾಗದ ಗೋಡೆಗಳಲ್ಲಿ ಕಂಡುಬಂದಿರುವ ತೇವಾಂಶವನ್ನು ತಕ್ಷಣವೇ ಸರಿಪಡಿಸುವುದು, ಕಟ್ಟಡದ ನಿರ್ವಹಣೆ ಮಾಡುವ ಜವಬ್ದಾರಿಯು ಸದರಿ ಸಂಸ್ಥೆಯವರದಾಗಿರುತ್ತದೆ ಹಾಗೂ ಈ ಪ್ರಮಾಣ ಪತ್ರವನ್ನು ಯಾವುದೇ ಸಮಯದಲ್ಲಿ ಹಿಂಪಡೆಯುವ ಷರತ್ತಿಗೊಳಪಟ್ಟಿರುತ್ತದೆ.

ಮುಂದಿನ ದಿನಗಳಲ್ಲಿ ಕಟ್ಟಡದಲ್ಲಿ ಯಾವುದಾದರೂ ಬದಲಾವಣೆ ಅಥವಾ ಹೆಚ್ಚುವರಿಯಾಗಿ ನಿರ್ಮಾಣ ಮಾಡಿದಲ್ಲಿ ಸದರಿ ಪ್ರಮಾಣ ಪತ್ರವು ತನ್ನಿಂತಾನೆ ರದ್ದುಗೊಳ್ಳುವುದು. ಅದ್ದರಿಂದ ಸದರಿ ಪ್ರಮಾಣ ಪತ್ರವನ್ನು Orchids The International School, No. 5/5, Hosahalli Village, Gollarapalya, Herohalli, Magadi Main Road, Bangalore – 560 0091 ಇಲ್ಲಿನ ಶಾಲಾ ಕಟ್ಟಡಕ್ಕೆ ತಾವುಗಳು ಡಿಸೆಂಬರ್ – 2021 ರಲ್ಲಿ ಸಲ್ಲಿಸಿರುವ ಪರೀಕ್ಷಾ ವರದಿಗಳ ಹಿನ್ನಲೆಯಲ್ಲಿ ಸದರಿ ಕಟ್ಟಡವನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳಲು ಸುರಕ್ಷತಾ ಪ್ರಮಾಣ ಪತ್ರವನ್ನು ನವೀಕರಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು,
ನಂ. 4, ಕಟ್ಟಡಗಳ ಉಪವಿಭಾಗ, ಬೆಂಗಳೂರು

ಸಹಾಯಕ ಕಾರ್ಯಪಾಲಕ ಅಭಿಯಂತರರು
ನಂ-4 ಕಟ್ಟಡಗಳ ಉಪ-ವಿಭಾಗ,
ಬೆಂಗಳೂರು.